ವಿಷಯ : ವರಾಹ ನೀರಾವರಿ ಯೋಜನೆಯ ಕುರಿತು

ಪ್ರಶ್ನೆ ಸಂಖ್ಯೆ 682 (7108) ಶ್ರೀ ಅಪ್ಪಣ್ಣ ಹೆಗ್ಡೆ (ಬೈಂದೂರು).–ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ವರಾಹ ನೀರಾವರಿ ಯೋಜನೆ ಅಂತಿಮವಾಗಿ ರೂಪುಗೊಂಡಿದೆಯೆ ;

ಆ. ಹಾಗಿದ್ದಲ್ಲಿ, ಯಾವಾಗ ಕಾರ್ಯ ಪ್ರಾರಂಭಿಸಲಾಗುವುದು ;

ಇ. ಸದರಿ ಯೋಜನೆಯಿಂದ ಮುಳುಗಡೆಯಾಗುವ ಕೃಷಿ ಭೂಮಿ ಹಾಗೂ ಅರಣ್ಯ ಭೂಮಿಯ ವಿಸ್ತೀರ್ಣವೆಷ್ಟು ;

ಈ. ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ನೆರವು ಸಿಗುವ ಸಂಭವವಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ. ಆಗಿದೆ.

ಆ. ಪುನರ್ ವಿಮರ್ಶಿಕ ವರಾಹ ಯೋಜನೆ (ಮೊದಲನೆ ಹಂತ) ಅಂದಾಜಿಗೆ ಆಡಳಿತ ಮಂಜೂರಾತಿಯಾದ ಕೂಡಲೇ ಕಾರ್ಯ ಪ್ರಾರಂಭಿಸಲಾಗುವುದು.

ಇ. ವರಾಹ ಯೋಜನೆ ಮೊದಲನೆ ಹಂತದಲ್ಲಿ 350 ಎಕರೆಗಳಷ್ಟು ಕೃಷಿ ಭೂಮಿಯು ಮತ್ತು 1,157 ಎಕರೆಗಳಷ್ಟು ಅರಣ್ಯ ಭೂಮಿಯ ಮುಳುಗಡೆಯಾಗುವುದೆಂದು ಅಂದಾಜು ಮಾಡಲಾಗಿದೆ.

ಈ. ಇಲ್ಲ.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಸೂರತ್‌ಕಲ್ ಕ್ಷೇತ್ರದಲ್ಲಿ ಸಮುದ್ರ ಕೊರೆತ ತಡೆಗಟ್ಟುವ ಬಗ್ಗೆ.

ಪ್ರಶ್ನೆ ಸಂಖ್ಯೆ 668 (1736) ಶ್ರೀ ಎಂ. ಲೋಕಯ್ಯಶೆಟ್ಟಿ (ಸೂರತ್‌ಕಲ್).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ದಕ್ಷಿಣ ಕನ್ನಡ ಜಿಲ್ಲೆಯ ಸೂರತ್‌ಕಲ್ ಕ್ಷೇತ್ರದಲ್ಲಿ ಸಮುದ್ರ ತೀರದಲ್ಲಿ ಕಳೆದ ಬಾರಿ ಸಮುದ್ರ ಕೊರೆತ ಆದ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ. ಬರುವ ಮಳೆಗಾಲದಲ್ಲಿ ಇನ್ನೂ ಹೆಚ್ಚಿನ ಕಡಲ ಕೊರೆತ ಆಗಿ ಜನರ ಆಸ್ತಿ ಮತ್ತು ಮನೆಗಳಿಗೆ ತುಂಬಾ ಹಾನಿ ಸಂಭವಿಸುವ ಸಂದರ್ಭ ಇರುವುದರಿಂದ ಈ ಭಾಗದಲ್ಲಿ ಖಾಯಂ ಆಗಿ ತಡೆ ದಂಡೆಗಳನ್ನು ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ. ಬಂದಿದೆ.

ಆ. ಈ ಪ್ರದೇಶದಲ್ಲಿ ಈಗಾಗಲೇ ತಾತ್ಕಾಲಿಕ ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ. ಖಾಯಂ ತಡೆಗೋಡೆ ಕಟ್ಟಲು ಅಂದಾಜು ಪಟ್ಟಿಯನ್ನು ಕೇಂದ್ರ ಸರ್ಕಾರದ ಅನುಮೋದನೆಗೆಂದು ಕಳುಹಿಸಲಾಗಿದೆ. ಅನುಮೋದನೆ ದೊರೆತ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ವಿಷಯ : ಸಾರ್ವಜನಿಕರು ತಮ್ಮ ಜಮೀನುಗಳಲ್ಲಿ ಗಿಡಮರಗಳನ್ನು ಬೆಳೆಸಲು ಅನುಮತಿ.

ಪ್ರಶ್ನೆ ಸಂಖ್ಯೆ 671 (1554) ಶ್ರೀ ಕೆ. ಮಲ್ಲಪ್ಪ (ಹರಿಹರ).—ಮಾನ್ಯ ಅರಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ವನ ಸಂಪತ್ತನ್ನು ಹೆಚ್ಚಿಸಲು ಸರ್ಕಾರದವರು ಯಾವ ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ;

ಆ. ಸಾರ್ವಜನಿಕರು ತಮ್ಮ ಸ್ವಂತ ಜಮೀನುಗಳಲ್ಲಿ ಗಿಡಮರಗಳನ್ನು ಬೆಳೆಸಲು ಅನುಮತಿ ಕೊಡಲಾಗುವುದೆ, ಹಾಗಿದ್ದಲ್ಲಿ ಯಾವ ಯಾವ ಜಾತಿಯ ಮರಗಳನ್ನು ಬೆಳೆಸಲು ಅನುಮತಿ ನೀಡಲಾಗುವುದು ;

ಇ. ವನ ಸಂಪತ್ತನ್ನು ಹೆಚ್ಚಿಸಲು ಸಾರ್ವಜನಿಕರು ಗಿಡಮರಗಳನ್ನು ಬೆಳೆಸಲು ಪ್ರೋತ್ಸಾಹವನ್ನು ನೀಡಲಾಗುವುದೇ, ಹಾಗಿದ್ದಲ್ಲಿ ಸಹಾಯಧನವನ್ನಾಗಲಿ ಅಥವಾ ಸಾಲವನ್ನಾಗಲಿ, ನೀಡಲಾಗುವುದೆ :

ಈ. ಈರೀತಿ ಸಾರ್ವಜನಿಕರು ಬೆಳೆಸಿದ ಗಿಡಮರಗಳನ್ನು ಯಾವ ಪರತ್ತುಗಳಿಲ್ಲದೆ ಮುಕ್ತವಾಗಿ ಮಾರಾಟಮಾಡಲು ಸರ್ಕಾರದವರು ಅನುಮತಿ ನೀಡುವರೆ ?